ಶ್ರೀ ಬಿ. ದೊಡ್ಡ ಜೋರೇಗೌಡ.—ಎಷ್ಟು ಪಿಕಪ್‌ಗಳಿಗೆ ಇದುವರೆಗೂ ಅಂದಾಜುಗಳು ತಯಾರಾಗಿವೆ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ 29 ಪಿಕಪ್‌ಗಳಿಗೆ ಅಂದಾಜುಗಳು ತಯಾರಾಗಿವೆ.

ಶ್ರೀ ಬಿ. ದೊಡ್ಡ ಜೋರೇಗೌಡ.—ಎಷ್ಟು ಪಿಕಪ್‌ಗಳ ಕೆಲಸ ಪೂರ್ಣವಾಗಿ ಮುಗಿದಿದೆ ?

ಶ್ರೀ ವೀರೇಂದ್ರ ಪಾಟೀಲ್.—ಯಾವುದೂ ಮುಗಿದಿಲ್ಲ. ಎಷ್ಟು ಸರ್ವೆ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ದುಡ್ಡಿನ ಅಭಾವ ಮತ್ತೆ ಕೆಲಸಗಳ ಮುಗಿಯುವಿಕೆ ಇವುಗಳನ್ನು ನೋಡಿ ಮಾಡುತ್ತೇವೆಂದು ಉದಾಸೀನವಾದ ಉತ್ತರ ಕೊಟ್ಟಿದ್ದಾರೆ. ತ್ವರಿತವಾಗಿ ಈ ಕೆಲಸವನ್ನು ಮಾಡುವುದರಿಂದ ಆಹಾರದ ಅಭಾವ ನೀಗುವುದಿಲ್ಲವೇ ? ಇಷ್ಟು ವಿಧಾನಪಾಗಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಆಹಾರಾಭಾವ ಇಡೀ ದೇಶದಲ್ಲಿದೆ, ಇಡೀ ರಾಜ್ಯದಲ್ಲಿದೆ. ಒಂದು ಕಡೆ ಮಾತ್ರ ಇಹೆಯೆಂದಲ್ಲ. ವಿಶ್ವೇಶ್ವರಯ್ಯ ನಾಲಾ ಸೀಫೇಜ್ ವಾಟರ್ ಹರಿದು ಹೋಗುತ್ತಿರುವುದನ್ನು ಉಪಯೋಗಿಸಿಕೊಳ್ಳಲು ಪಿಕಪ್‌ಗಳನ್ನು ಕಟ್ಟಬೇಕೆಂದು ಅಂದಾಜುಗಳನ್ನು ತಯಾರು ಮಾಡಿದ್ದೇವೆ. ಈ ವರ್ಷ ಎಷ್ಟು ಕೆಲಸ ನಡೆಯುವುದಕ್ಕೆ ಶಕ್ಯವಿದೆ ಅಷ್ಟು ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

———

## Chairman of Mysore State Handicrafts Corporation

*Q.—405. Sri A. J. DODDAMETI (Ron).—

Will the Chief Minister be pleased to state :—

(*a*) whether the Chairman of the Mysore State Handicrafts Corporation is conversant with Kannada ;

(*b*) the term of office of the Chairman ;

(*c*) the duties and functions of the Chairman ;

(*d*) whether Government have investigated into the working conditions of the above Board ?

*A.*—Sri A. P. APPANNA (Deputy Minister of Industries).—

(*a*) Yes.

(*b*) The term is indefinite until otherwise determined by Governor.

(*c*) No duties are assigned to Chairman apart from those of the Board.

(*d*) Yes.

ಶ್ರೀ ಎ. ಜೆ. ದೊಡ್ಡಮೆಟಿ.—ಈ ಸಂಸ್ಥೆಯು ಪುನರ್ಘಟನೆಯಾದದ್ದು ಎಂದು ? ಮತ್ತು ಆ ಸಂಸ್ಥೆಯ ಅಧ್ಯಕ್ಷರು ಯಾರು ?

ಶ್ರೀ ಎ. ಪಿ. ಅಪ್ಪಣ್ಣ.—1964ರಲ್ಲಿ ಪುನರ್ಘಟನೆಯಾಯಿತು. ಶ್ರೀಮತಿ ಪಿ. ಎಂ. ರೆಡ್ಡಿ ಅವರು ಇದರ ಅಧ್ಯಕ್ಷರು.

ಶ್ರೀ ಹೆಚ್. ಜೆ. ದೊಡ್ಡಮೇಟಿ.—ಅವರಿಗೆ ವೇತನವೇನಾದರೂ ಉಂಟೋ ?

ಶ್ರೀ ಎ. ಪಿ. ಅಪ್ಪಣ್ಣ —ಅವರಿಗೆ ಆರ್ಟಿಕರ್ ಆಫ್ ಅಸೋಸಿಯೇಷನ್‌ನಲ್ಲಿ ಕೆಂಡಂತೆ, ಒಂದು ಮಾಟಿಂಗಿಗೆ 50 ರೂಪಾಯಿಗೆ ಮೀರದೆ ವೇತನವನ್ನು ನಿಗದಿ ಮಾಡಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಸಂಸ್ಥೆಗೆ ಸರ್ಕಾರದವರು ಗ್ರಾಂಟ್ ರೂಪದಲ್ಲಾಗಲೀ, ಸಹಾಯ ರೂಪದಲ್ಲಾಗಲೀ ಎಷ್ಟು ಹಣವನ್ನು ಒದಗಿಸಿದ್ದಾರೆ ?

ಶ್ರೀ ಎ. ಪಿ. ಅಪ್ಪಣ್ಣ.—ಈ ಸಂಸ್ಥೆಗೆ ಬರೀ ಷೇರು ಬಂಡವಾಳವನ್ನು ಸರ್ಕಾರ ಕೊಟ್ಟಿದೆ. ಅದರ ಅಥರೈಸ್ಡ್ ಷೇರ್ ಕ್ಯಾಪಿಟಲ್ 50 ಲಕ್ಷ ರೂಪಾಯಿ.

ಶ್ರೀ ಎ. ಜೆ ದೊಡ್ಡಮೇಟಿ.—50 ಲಕ್ಷ ರೂಪಾಯಿಗಳಲ್ಲಿ ಈ ವರ್ಷದಲ್ಲಿ ಕುಶಲ ಕೈಗಾರಿಕೆಗಳಲ್ಲಿ ಎಷ್ಟು ಕೆಲಸವನ್ನು ಮಾಡಿದ್ದಾರೆ ?

9-30 A.M.

ಶ್ರೀ ಎ. ಪಿ. ಅಪ್ಪಣ್ಣ.—ಸಾಧಾರಣವಾಗಿ ವ್ಯವಹಾರಿಕವಾಗಿ 35 ಲಕ್ಷದಿಂದ 45 ಲಕ್ಷದವರೆಗೆ ವ್ಯಾಪಾರವನ್ನು ಮಾಡುತ್ತಾ ಇದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ಸಂಸ್ಥೆಯಲ್ಲಿ ಎಷ್ಟು ಜನರಿದ್ದಾರೆ ? ಎಲ್ಲರೂ ಸರ್ಕಾರದಿಂದ ನೇಮಕವಾದವರೇ ?

ಶ್ರೀ ಎ. ಪಿ. ಅಪ್ಪಣ್ಣ.—ಅದರಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಸರ್ಕಾರಿ ಅಧಿಕಾರಿ ಮತ್ತು ಇಬ್ಬರು ಅಧಿಕಾರಿಗಳು ಸರ್ಕಾರಿ ಅಧಿಕಾರಿಗಳು. ಬಾಕಿ ಖಾಸಗಿ ಜನರಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ಸಂಸ್ಥೆಯಲ್ಲಿರುವ ಅಧಿಕಾರಿಗಳಿಗೆ ಕಾರ್ಯವನ್ನು ನೇಮಿಸಿಲ್ಲ ಎಂದು ಹೇಳಿದಿರಿ. ಬೋರ್ಡಿನ ಕೆಲಸ ಮಾಡುತ್ತಾರೆ ಎಂದು ಹೇಳಿದ್ದೀರಿ. ಬೋರ್ಡಿನ ಕೆಲಸ ಎಂದು ಏನು ಮಾಡುತ್ತಾ ಇರುವುದು ?

ಶ್ರೀ ಎ. ಪಿ. ಅಪ್ಪಣ್ಣ.—ಬೋರ್ಡಿನ ಕೆಲಸಗಳನ್ನು ಆರ್ಟಿಕರ್ ಆಫ್ ಅಸೋಸಿಯೇಸ್ಸಿನ ಆರ್ಟಿಕಲ್ ನಂಬರ್ಸ್ 26 ರಿಂದ 31ರಲ್ಲಿ ನಿರೂಪಣೆ ಮಾಡಿದ್ದಾರೆ. ಬೇಕಾದರೆ ಆರ್ಟಿಕರ್ ಆಫ್ ಅಸೋಷಿಯನ್‌ನ್ನು ಸಭೆಯ ಮೇಜಿನ ಮೇಲೆ ಇಡಲು ಏರ್ಪಾಡುಮಾಡುತ್ತೇನೆ.

---

## SHORT NOTICE QUESTIONS AND ANSWERS

### Admission to P.U.C. and Degree Courses in Hassan

*Q.*—71. Sri H. N. NANJE GOWDA (Arakalgud).—

Will the Minister for Education be pleased to state :—

(*a*) the number of applicants in the Government First Grade College, Hassan seeking admission to (i) P.U.C., (ii) I. B.A., (iii) I. B.Sc. classes during current year ;

(*b*) the number of students that are provided seats in these classes (Classwise details may be given) ;

(*c*) whether the Government is in a position to provide seats for all the applicants ?